# ಬಾಣಂತಿ ಎನ್ನ ಬಾ ಅಂತಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 398.
2. **Note:** Lyrics are as per the above reference book. This song is not available in other standard books that I referred.

ರಾಗ: ಕಾಂಭೋಜಿ          ತಾಳ: ಛಾಪು

ಬಾಣಂತಿ ಎನ್ನ ಬಾ ಅಂತಿ    ॥ ಪ ॥

ಬಾಣಂತಿಯೆಂಬೋ ಬಗೆಯ ನೀನರಿತು
ಬಾರೆಂದು ಕರೆವೋದುಚಿತವೆ ರಂಗ    ॥ ಅಪ ॥

ಹಿಂಗದೆ ಮೊಲೆ ಹಾಲು ನೆರೆಮನೆಗೊಳ್ವೆಗಿ
ಭಂಗ ಪಡಲಾರೆ ಕಂದನಿಗಾಗಿ
ಬಾಣಂತಿಯೆಂಬೋ ಬಗೆಯ ನೀನರಿತು
ಬಾರೆಂದು ಕರೆವೋದುಚಿತವೆ ರಂಗ    ॥ ೧ ॥

ಖಾರ ಕಷಾಯಂಗಳು,
ಕೇಳೆಲೊ ರಂಗ ಒಪ್ಪೊತ್ತಿನಾಹಾರವು
ಯಾರು ಹೇಳಿದರು ನೀ ತಿರುಗಿ ಹೇಳುತಿದ್ದೆ
ಊರ ನಾರಿಯರೆಲ್ಲ ನಗರೇನೊ ರಂಗ    ॥ ೨ ॥

ಗುಟ್ಟು ಗುಮ್ಮುತಲಿದೆಯೊ,
ಕೇಳೆಲೊ ರಂಗ, ಮೈಯೊಳು ಕಷ್ಟ ವಾಗುತಲಿದೆಯೊ
ಎಷ್ಟು ಹೇಳಿದರು ಮತ್ತಷ್ಟು ಹೇಳುತಿದ್ದೆ
ನಿಷ್ಠೂರವೇತಕೆ ಬೇಡ ರಂಗಯ್ಯ    ॥ ೩ ॥

ಒಡವೆ ವಸ್ತುಗಳೆಲ್ಲ, ಕೇಳೆಲೊ ರಂಗ
ಚೆಂದದೊಳಿಡಬಾರದು ಮೈಮೇಲೆ
ಬಡತನವಾಗಿರುವುದೆಲ್ಲವ ನೋಡಿ
ದುಡುಕು ಮಾಡಿ ಕೈ ಪಿಡಿವರೆ ರಂಗ || ೪ ||

ಕಟ್ಟಿದ ಮಂಡೆ ಕಟ್ಟಿ, ಕೇಳೆಲೊ ರಂಗ
ಪಣೆಯೊಳಿಟ್ಟ ಸಾದಿನ ಬೊಟ್ಟು
ತೊಟ್ಟ ಕುಪ್ಪಸವೆಲ್ಲ ಗುಷ್ಟು ಎಣ್ಣೆ ಮಣಕು
ಮುಟ್ಟಬೇಡ ಸಿರಿ ಪುರಂದರ ವಿಠಲ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಗುಷ್ಟ** = ಕೊಳಕು, ಕೆಟ್ಟ

**Classification:** Mundige
**Ankita:** siri purandara vittala
**Location:** NA
**Category:** Tatva Jnana, Samsara Chitragalu
**Sub-Category:** ranga, halu, koosu, bananti, oota, hengasu, nage, abharana, badava, kai, ooru, deha, dharma,
**Pravachana:** NA
**Explanation:** nAda-nIrAjanadim dAsa surabhi